ಕೊಲೆಯಾಗಿ ಬಿದ್ದಿದ್ದ ಅಮ್ಮುವಿನ ಸುತ್ತ ಎಲ್ಲಾ ವಸ್ತುಗಳು, ಎಲ್ಲೆಡೆ, ದೂರದೂರಕ್ಕೂ ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿತ್ತು. ಆಕೆಯ ಮೈಮೇಲಿನ ಒಡವೆಗಳು ಸ್ನಾನದ ಮನೆಯ ಕಪಾಟಿನಲ್ಲೇ ಇತ್ತು. ಆಕೆಯ ರೂಮಿನ ಬೀರುವಿನಲ್ಲಿ ಅಥವಾ ಇನ್ನೆಲ್ಲೂ ಕೂಡ ಏನೂ ತಡಕಾಡಿದಂತೆ ಅಥವಾ ಕಳುವಾದಂತೆ ತೋರಲಿಲ್ಲ. ಹಂತಕನು ಕಳುವಿಗಾಗಿಯೇ ಬಂದವನಾಗಿದ್ದರೆ ಸುತ್ತಲೂ ಸಾಕಷ್ಟು ತೆರೆದುಕೊಂಡಂತೆಯೇ ಸಿಗುವ ಸ್ವಲ್ಪ ದುಡ್ಡು, ಸಣ್ಣಪುಟ್ಟ ಬೆಲೆಬಾಳುವ ವಸ್ತುಗಳಿದ್ದವು.

'ಕೊಲೆಗಾರ ಕಳ್ಳತನಕ್ಕೋಸ್ಕರ ಬಂದಂತಿಲ್ಲ, ಅಲ್ವಾ ಸಾರ್?'

'ನಾನು ಅದನ್ನೇ ಯೋಚನೆ ಮಾಡ್ತಿದ್ದೆ ವಿನಯ್. ಆದರೆ ನಾವು ಒಂದನ್ನ ತಿಳ್ಕೊಳ್ಬೇಕು. ಯಾವುದೂನೂ ಅದು ಕಂಡಂಗೇ ಇರಬೇಕಾಗಿಲ್ಲ.'

'ಆದರೆ ಏನೂನು ಕಳುವಾಗಿಲ್ಲ ಅಲ್ವಾ ಸಾರ್?'

'ಹೇಗೇಳ್ತೀರಿ? ಕೇವಲ ಕಳ್ಳತನ ಮಾಡಲು ಬಂದವನಿಂದ ಅಚಾನಕ್ಕಾಗಿ ಕೊಲೆ ಆಗಿ, ಗಾಬರಿ ಬಿದ್ದೋ ಅಥವಾ ಸಿಕ್ಕಿಬೀಳೊ ಅಂತಹ ಪರಿಸ್ಥಿತಿ ಬಂದು, ತಪ್ಪಿಸಿಕೊಂಡರೆ ಸಾಕು ಅಂತಾನೋ ಏನೋ... ಏನೂ ಖಚಿತವಾಗಿ ಹೇಳಕ್ಕಾಗಲ್ಲಾರೀ.'

'ಸಾರ್ ಮುಂದುಕ್ಕೆ?'

'ನೀವು ಚೈನ್ ಆಫ್ ಕಸ್ಟಡಿ ಇಡಬೇಕು.'

'ಹಾಗಂದ್ರೆ ಸಾರ್?'

'ನಾವು ಈ ಘಟನಾ ಸ್ಥಳದಲ್ಲಿ ಕಲೆಕ್ಟ್ ಮಾಡಿರೋ ಇಷ್ಟೊಂದು ಸಾಕ್ಷಿ ಪುರಾವೆಗಳು, ಅಂದರೆ ಬ್ಲಡ್ಡು, ಜೊಲ್ಲು, ಕೂದಲು, ಫೈಬರ್ ಸ್ಯಾಂಪಲ್ಸ್, ಫೋಟೋಸು, ಡೈರಿ, ಕಾಗದ ಪತ್ರಗಳು, ರಶೀತಿಗಳು, ಕ್ರೆಡಿಟ್ ಕಾರ್ಡ್ಸ್... ಇನ್ನೂ ಏನೇನೋ. ಇವೆಲ್ಲಾ ತಗೊಂಡೋಗಿ ನಮ್ಮ ಸ್ಟೇಷನ್ನಿನಲ್ಲಿ ಭದ್ರವಾಗಿಡ್ತೀವಿ, ಆಮೇಲೆ ಇವೆಲ್ಲಾ ಟೆಸ್ಟಿಂಗ್‌ಗೆ ಫೊರೆನ್ಸಿಕ್ ಲ್ಯಾಬ್‌ಗೆ ಹೋಗುತ್ತದೆ, ನಂತರ ಮತ್ತೆ ಸ್ಟೇಷನ್ನಿಗೇ ವಾಪಸ್ ಬರುತ್ತೆ, ಆಮೇಲೆ ವಿಚಾರಣೆ ಟೈಮಲ್ಲಿ ಕೋರ್ಟ್‌ಗೆ ಹೋಗುತ್ತೆ.... ಹೀಗೆ ಇದು ಕೈ ಬದಲಾಯಿಸ್ತಾನೇ ಇರುತ್ತೆ... ನಾವು ಒಂದು ರೆಕಾರ್ಡ್ ಇಡಬೇಕಾಗುತ್ತೆ. ಯಾವ ಯಾವ ಟೈಮಲ್ಲಿ ಯಾರ್ಯಾರ ಸುಪರ್ದಿನಲ್ಲಿರುತ್ತೇ ಈ ಎವಿಡೆನ್ಸ್‌ಗಳು ಅಂತ. ಅದೇ ಚೈನ್ ಆಫ್ ಕಸ್ಟಡಿ ಅನ್ನೋದು.'

'ಸಾರ್ ಭುಜಂಗ ಫೋನ್ ಮಾಡ್ತಿದ್ದಾರೆ... ಬ್ಲಡ್ ಸ್ಪಾಟರ್ ಅನಲಿಸ್ಟ್ ಬಂದಿದ್ದಾರಂತೆ.'

'ಮೇಲೆ ಕಳುಸ್ತೋದಕ್ಕೆ ಹೇಳಿ...'

ಸ್ವಲ್ಪ ಹೊತ್ತಿನಲ್ಲಿಯೇ, ರಿಟೈರ್ಮೆಂಟ್ ಹೊಸ್ತಿಲಲ್ಲಿ ನಿಂತಂಥ ವ್ಯಕ್ತಿ ಬಂದಿದ್ದರು.

'ನಾನು ಮಾದಪ್ಪ ಸಾರ್... ಸ್ಪಾಟ್ ನೋಡಬಹುದಾ ಸಾರ್?'

'ಯೆಸ್... ಫಾಲೊ ಮಿ...'

ಮಾಯಣ್ಣ ಮತ್ತು ವಿನಯ್ ಜೊತೆ ಒಳಹೊಕ್ಕ ಮಾದಪ್ಪ ಅಲ್ಲಿನ ದೃಶ್ಯ ನೋಡಿ ಯಾವುದೇ ಉದ್ವೇಗಕ್ಕೊಳಗಾಗದೆ ಕ್ಯಾಶುವಲ್ ಆಗಿ ತಮ್ಮ ಬ್ಯಾಗಿನಿಂದ ಕ್ಯಾಮೆರಾ ಮತ್ತು ಒಂದು ಉದ್ದನೆಯ ಸ್ಕೇಲ್ ತೆಗೆದು, ವಿನಯ್‌ನ ನೆರವಿನೊಂದಿಗೆ ಆ ಸ್ಕೇಲು ಪ್ರತಿ ಫೋಟೊ ಫ್ರೇಮ್‌ನಲ್ಲೂ ಬೀಳುವಂತೆ ಎಲ್ಲೆಲ್ಲಿ ರಕ್ತ ಚಿಮ್ಮಿ ಎರಚಾಡಿದೆಯೋ ಅಲ್ಲೆಲ್ಲಾ ಮತ್ತು ಬಾಡಿ ಇರುವಂತ ಜಾಗ ಎಲ್ಲಾ ಕ್ಲಿಕ್ ಮಾಡಿ, ಟೇಪ್‌ನಲ್ಲಿ ಅಳತೆಗಳನ್ನು ಮಾಡಿ, ಜೊತೆಗೆ ಮನೆಯ ಇಡೀ ಒಳಾಂಗಣದ, ಅಂದರೆ ಕಿಟಕಿ ಬಾಗಿಲುಗಳು, ಎಲ್ಲಾ ಕೋಣೆಗಳು, ಬಾಡಿಯು ಇರುವ ಜಾಗ, ಇನ್ನೆಲ್ಲಾ ವಿವರಗಳೊಂದಿಗೆ ಅಳತೆಗಳ ಸಮೇತ ಒಂದು ಸ್ಕೆಚ್ ಮಾಡಿ ಸುಮಾರು ಮುಕ್ಕಾಲು ಗಂಟೆಯಲ್ಲಿ ತಮ್ಮ ಕೆಲಸ ಮುಗಿಸಿದ್ದರು.

'ಸಾರ್ ಏನೂ ಯೋಚನೆ ಮಾಡಬೇಡಿ. ಮೂವತ್ತು ವರ್ಷಗಳ ಅನುಭವ. ಮೈಂಡಲ್ಲೇ ಕೂಡಿ, ಕಳೆದು, ಗುಣಿಸಿ, ಬಾಗಿಸಿ, ಕರೆಕ್ಟ್ ಪಿಕ್ಚರ್ ಕೊಡ್ತೀನಿ ಸಾರ್. ಆದ್ರೂ ಪ್ರೊಸೀಜರ್ ಫಾಲೊ ಮಾಡಬೇಕು ಅಲ್ವಾ ಸಾರ್. ಪೋಸ್ಟ್ ಮಾರ್ಟಮ್ ರಿಪೋರ್ಟ್‌ನೂ ನೋಡಿ, ಈ ಮರ್ಡರ್, ಎಲ್ಲಿ, ಹೇಗೆ ನಡಿತೊ ಹಾಗೇ ಹೇಳ್ತೀನಿ ಸಾರ್'

ಮಾದಪ್ಪ ಕೆಳಗೆ ಹೋದ ಮೇಲೆ,

'ಅದು ಟೊಳ್ಳು ವಿಶ್ವಾಸ ಅಂತ ಅನ್ನಿಸೊಲ್ಲ ವಿನಯ್. ಇರಲಿ ನೋಡೋಣ. ಘಟನೆಯ ಮರುಸೃಷ್ಟಿ ಅನ್ನೋದು ಕೋರ್ಟ್‌ನಲ್ಲಿ ಬಾಳ ಮುಖ್ಯ ಆಗುತ್ತೆ. ಕೋರ್ಟ್‌ನಲ್ಲಿ ನಾವು, ಅಂದರೆ ಪ್ರಾಸಿಕ್ಯೂಷನ್ನವರು ಹೇಳೋ ಈ ಮರ್ಡರ್ ಸ್ಕ್ರಿಪ್ಟಲ್ಲಿ ಸ್ವಲ್ಪ ಬಿಗಿ, ಖಾಚಿತ್ಯ ಇಲ್ಲಾ ಅಂದ್ರೆ, ಡಿಫೆನ್ಸ್ ಲಾಯರ್, ಜಡ್ಜ್ ತಲೇಲಿ ಇಲ್ಲದ ಸಂದೇಹ, ಸಂಶಯ ಎಲ್ಲಾ ತುಂಬಿ, ಕೇಸ್ ಮುಳುಗಿಸ್ಬಿಡ್ತಾರೆ'

'ಸಾರ್ ಮೂರೂವರೆ ಆಯ್ತು. ಯಾರು ಊಟ ಮಾಡಿಲ್ಲ.'

'ನೋ ಪ್ರಾಬ್ಲಂ ಇಲ್ಲಿಗೇ ತರ್ಸೋಣ ಬಿಡಿ... ಇನ್ನು ಮೂವತ್ತು ನಿಮಿಷದಲ್ಲಿ ಎಸ್.ಪಿ. ಸಾಹೇಬ್ರು ಬರ್ತಾರೆ... ಕೆಳಗೆ ಆ ನಾಲ್ಕು ಜನ ಕಾನ್ಸ್‌ಟೇಬಲ್ಸ್‌ಗೆ ಸರಿಯಾಗಿ ಕ್ರೌಡ್ ಕಂಟ್ರೋಲ್ ಮಾಡೋದಕ್ಕೆ ಹೇಳ್ದೆ ಅಂತ ಹೇಳಿ... ಅದರಲ್ಲೂ ಮೀಡಿಯಾದವರು ಸ್ವಲ್ಪ ಅನ್ ರೂಲಿ, ಅಷ್ಟೇ ಅಲ್ಲ ಆತುರಗೆಟ್ಟವರು. ಅವ್ರಿಗೆ ಇವತ್ತೇ ಅಪರಾಧೀನ ಅರೆಸ್ಟ್ ಮಾಡ್ಬೇಕು, ನಾಳೆನೆ ವಿಚಾರಣೆ ಮುಗಿಸ್ಬೇಕು, ನಾಳುದ್ದೇ ಗಲ್ಲಿಗಾಗ್ಬೇಕು. ಬ್ಯಾರಿಯರ್ ಟೇಪ್ ಯಾರೂ ಕ್ರಾಸ್ ಮಾಡೊ ಹಾಗಿಲ್ಲ... ಇಲ್ಲಿ ನಾನು ಮ್ಯಾನೇಜ್ ಮಾಡ್ತೀನಿ. ನೀವೂ ಇಲ್ಲೇ ಇರಿ.'

'ಸಾರ್ ಸಂಜೆ ಆರಕ್ಕೆ ಪೋಸ್ಟ್ ಮಾರ್ಟಮ್ ಟೈಮ್ ಫಿಕ್ಸ್ ಆಗಿದೆ.'

'ನೋ ಪ್ರಾಬ್ಲಂ. ಸಾಹೇಬ್ರು ವಿಸಿಟ್ ಮಾಡಿ ಹೋದ್ಮೇಲೆ ಇಲ್ಲಿ ಇನ್ನೂ ಏನಾದರೂ ಇದ್ರೆ ಮುಗಿಸಿ, ಫೋಟೊಗ್ರಾಫರ್, ಫಿಂಗರ್ ಪ್ರಿಂಟ್ ಎಕ್ಸಪರ್ಟ್ಸ್, ಡಾಗ್ ಹ್ಯಾಂಡ್ಲರ್ಸ್‌ನೆಲ್ಲಾ ವಾಪಸ್ ಕಳ್ಸೋಣ, ನಂತರ ನೀವು ಆಂಬ್ಯುಲೆನ್ಸ್ ಕರೆಸಿ. ಜೊತೆಗೆ ಪೋಸ್ಟ್ ಮಾರ್ಟಮ್ ಮಾಡೋ ಡಾಕ್ಟರ್ ಕೂಡ ಬರಬೇಕು. ಅವರು ಇನಿಷಿಯಲ್ ಅಬ್ಸರ್ವೇಷನ್ಸ್ ಮಾಡಿ, ಸರಿಯಾದ ರೀತೀಲಿ ಬಾಡಿನ ಪೋಸ್ಟ್ ಮಾರ್ಟಮ್‌ಗೆ ತಗೊಂಡು ಹೋಗ್ತಾರೆ.'

'ಸಾರ್, ಅಷ್ಟರಲ್ಲಿ ಅಮ್ಮು ಅವರ ಕಡೆಯವರು ಯಾರಾದ್ರೂ ಬಂದ್ರೆ'

'ಪೋಸ್ಟ್ ಮಾರ್ಟಮ್ ಆದ್ಮೇಲೆ ನೋಡಲಿ ಬಿಡಿ. ಹೇಗೂ ಇಟ್ ಇಸ್ ಎ ಫಾಸ್ಟ್ಲೀ ಸೈಟ್. ಈ ಸಂಜೆಯೊಳಗೆ ಈ ರವಿ, ಸಿತಾರ, ಜಯಂತ್, ಆ ಡೈರೆಕ್ಟರ್, ಎಸ್ಟೇಟ್ ಮ್ಯಾನೇಜರ್, ಅಮ್ಮು ಅವರ ಮಲತಾಯಿ ಇನ್ನೂ ಯಾರ್ಯಾರು ಸಂಬಂಧಪಟ್ಟಿದ್ದಾರೋ ಅವರೆಲ್ಲರ ಎಲ್ಲಾ ಕಾಂಟಾಕ್ಟ್ ಡೀಟೈಲ್ಸ್, ಅಡ್ರೆಸ್ ನನ್ನ ಟೇಬಲ್ ಮೇಲೆ ಇರಬೇಕು.'

'ಯೆಸ್ ಸಾರ್.'

ಎಸ್ಪಿ ಸಾಹೇಬರು ಕಾರಿಳಿದು ಅಪರಾಧ ವಲಯದ ಅಂಚಿಗೆ ಬರುತ್ತಿದ್ದಂತೆಯೇ ಅವರನ್ನು ಅಡ್ಡಗಟ್ಟಿ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದ ಸುದ್ದಿ ಮಾಧ್ಯಮದವರಿಗೆ, 'ತನಿಖೆ ಆರಂಭವಾಗಿದೆ, ನಿರ್ದಿಷ್ಟ ಹಾಗೂ ನಿಖರ ಸಾಕ್ಷಿಗಳು ದೊರೆತಿವೆ ಅಂತ, ಈ ಕೊಲೆ ಪ್ರಕರಣದ ತನಿಖಾಧಿಕಾರಿಯಾಗಿರುವ, ನಮ್ಮ ಎಸ್ ಐ ಹೇಳಿದ್ದಾರೆ. ಶೀಘ್ರದಲ್ಲೇ ಅಪರಾಧಿಯನ್ನು ಬಂಧಿಸುತ್ತೇವೆ' ಎಂದು ಮಾಮೂಲಿ ಹೇಳಿಕೆ ಕೊಟ್ಟು, ನೇರ ಕ್ರೈಮ್ ಸೀನ್‌ಗೆ ಬಂದಿದ್ದರು.

'ಮಾಯಣ್ಣ, ಈಸ್ ಮರ್ಡರ್ ವಿಕ್ಟಿಮ್ ಐಡೆಂಟಿಫೈಡ್ ಪ್ರಾಪರ್ಲೀ?'

'ಯೆಸ್ ಸಾರ್, ಅವರು ನೋಟೆಡ್ ಟೀವಿ ಪರ್ಸಾನಾಲಿಟಿ. ಅಲ್ಲದೆ ಅವರ ಮನೆ ಕೆಲಸದಾಕೆ ಐಡೆಂಟಿಫೈ ಮಾಡಿದ್ದಾರೆ, ಜೊತೆಗೆ ಅವರ ಎಲ್ಲಾ ಐಡೆಂಟಿಫಿಕೇಷನ್ ಕಾರ್ಡ್ಸ್, ಒಂದಷ್ಟು ಹಳೇ ಮೆಡಿಕಲ್ ಡಾಕ್ಯುಮೆಂಟ್ಸ್ ಕಲೆಕ್ಟ್ ಮಾಡಿದ್ದೀವಿ ಸಾರ್.'

'ಓಕೆ, ಈ ತನಿಖೆ ಎಷ್ಟು ಬೇಗ ಮುಗುದ್ರೆ ಅಷ್ಟು ಒಳ್ಳೆಯದು.'

'ಯೆಸ್ ಸಾರ್.'

ಮಾಯಣ್ಣ, ಸಾಹೇಬರನ್ನ ಕೊಲೆ ನಡೆದ ನಡುಮನೆಗೆ ಕರೆದುಕೊಂಡು ಹೋಗಿ ಎಲ್ಲವನ್ನೂ ಸಂಕ್ಷಿಪ್ತವಾಗಿ ವಿವರಿಸಿ ಹಿಂದಕ್ಕೆ ಕಳುಹಿಸಿ ಕೊಟ್ಟಿದ್ದ. ಇದು ಅನಿವಾರ್ಯ ಔಪಚಾರಿಕತೆ–ಹಾಡುಹಗಲೇ ನಡೆದ ಈ ಕೊಲೆ ಪ್ರಕರಣ, ಇಡೀ ರಾಜ್ಯದ ಗಮನಸೆಳೆದು, ಅಲ್ಲಿಗೆ ಯಾವೊಬ್ಬ ಮೇಲಧಿಕಾರಿಯೂ ಸುಳಿದಿಲ್ಲ ಎಂದಾದರೆ ತಪ್ಪು ಸಂದೇಶ ರವಾನೆಯಾಗುವ ಸಾಧ್ಯತೆ ಇತ್ತು.

ಇತರೆ ವಿಧಿವಿಧಾನಗಳು ಮುಗಿದ ನಂತರ, ಅಮ್ಮು ಕೊಲೆಯಾದ ಅಪರಾಧ ಸ್ಥಳದ ಪ್ರಾಥಮಿಕ ತನಿಖೆಯ ಕೊನೆಯ ಭಾಗವಾದ ಪೋಸ್ಟ್ ಮಾರ್ಟಮ್ ಮಾತ್ರ ಉಳಿದಿತ್ತು. ಅಷ್ಟೊತ್ತಿಗೆ ಆಂಬ್ಯುಲೆನ್ಸ್ ಜೊತೆಗೆ, ಮಾಯಣ್ಣನಿಗೆ ಪರಿಚಿತರೇ ಆದ ಹಿರಿಯ ಫೊರೆನ್ಸಿಕ್ ಪ್ಯಾಥಾಲಜಿಸ್ಟ್ ಡಾ. ಪರಮಶಿವಯ್ಯ ಕೂಡ ಸಕಲಸಿದ್ಧರಾಗಿ ಬಂದಿದ್ದರು. ಬಂದವರೇ ಮಾಯಣ್ಣನಿಗೆ ವಿಷ್ ಮಾಡಿ, ನೇರ ಅಮ್ಮುವಿನ ಶವದ ಬಳಿಗೆ ತೆರಳಿ, ಕೆಳಗೆ ಬಿದ್ದಿದ್ದ ಶವದ ಭಂಗಿ, ಹಾಕಿದ್ದ ಬಟ್ಟೆ, ಸುತ್ತಲಿನ ಮತ್ತು ಶವದ ಉಷ್ಣಾಂಶ, ಸಾವಿಗೆ ಬಹುತೇಕ ಕಾರಣವಾದ, ತಲೆಗೆ ಬಿದ್ದ ಪೆಟ್ಟುಗಳು, ಅದರಿಂದ ಚೆಲ್ಲಾಡಿದ ರಕ್ತದ ಕಲೆ, ಪ್ರಮಾಣ, ಇನ್ನೂ ಕೆಲವಾರು ವಿವರಗಳ ಟಿಪ್ಪಣಿಗಳನ್ನು ಮಾಡಿಕೊಂಡು, ಫೋಟೊಗಳನ್ನು ತೆಗೆದುಕೊಂಡು ಶವವನ್ನು ಆಂಬ್ಯುಲೆನ್ಸ್‌ಗೆ ಸಾಗಿಸಲು ಅನುಮತಿ ನೀಡಿದ್ದರು.

(ಸಶೇಷ)